ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ/ ರಿವೈಜ್ ಕೋರ್ಸ್ 02-01-1980.

# *ಬರುವಂತಹ ಪ್ರಪಂಚವು ಹೇಗಿರುತ್ತದೆ?*

(आने वाली दुनिया कैसी होगी?)

**ಸ್ವರ್ಗ ರಚಯಿತ ಶಿವ ತಂದೆ ಹೇಳಿದರು.**

ಇಂದು ಬಾಪ್‌ದಾದಾರವರು ಯಾವ ಸಭೆಯನ್ನು ನೋಡುತ್ತಿದ್ದಾರೆ? ಇದು ಸಾಹೇಬನಪುತ್ರ ಮತ್ತು ಸಾಹೇಬನಪುತ್ರಿಯರು ಸೋ ಭವಿಷ್ಯದಲ್ಲಿ ರಾಜಕುಮಾರ-ರಾಜಕುಮಾರಿಯರ ಸಭೆ, ಸತ್ಯವಾದ ಸಾಹೇಬನ ಮಕ್ಕಳೆಲ್ಲರೂ ಒಡೆಯನಪುತ್ರ ಮತ್ತು ಪುತ್ರಿಯರಾಗಿದ್ದಾರೆ. ಈ ನಶೆಯು ಸದಾ ಇರುತ್ತದೆಯೇ? ರಾಜಕುಮಾರ ಅಥವಾ ರಾಜಕುಮಾರಿಯರ ಜೀವನಕ್ಕಿಂತಲೂ ಈ ಜೀವನವು ಪದಮಪಟ್ಟು ಶ್ರೇಷ್ಠವಾಗಿದೆ. ಇಂತಹ ಶ್ರೇಷ್ಠಾತ್ಮರು ತಮ್ಮ ಶ್ರೇಷ್ಠತೆಯನ್ನು ತಿಳಿದುಕೊಳ್ಳುತ್ತಾ, ನಿರಂತರ ಅದೇ ನಶೆಯಲ್ಲಿರುತ್ತೀರಾ? ಇಂದು ವತನದಲ್ಲಿ ಬಾಪ್ ಮತ್ತು ದಾದಾ ಇಬ್ಬರ ಆತ್ಮಿಕ ವಾರ್ತಾಲಾಪವು ನಡೆಯುತ್ತಿತ್ತು- ಸಾಹೇಬನ ಮಕ್ಕಳ ಮಹತ್ವಿಕೆಯು ಎಷ್ಟೊಂದು ಮಹಾನ್ ಆಗಿದೆ. ಭವಿಷ್ಯ ಜೀವನದ ಸರ್ವಸಂಸ್ಕಾರಗಳು ಈ ಜೀವನದಿಂದಲೇ ಆರಂಭವಾಗುತ್ತದೆ. ಭವಿಷ್ಯದಲ್ಲಿ ರಾಜವಂಶವಾಗುವ ಕಾರಣದಿಂದ, ರಾಜ್ಯಾಧಿಕಾರಿ ಜೀವನ ಇದಿಂದಲೇ ಆರಂಭವಾಗುತ್ತದೆ. ಸರ್ವ ಸಂಪತ್ತಿನಿಂದ ಸಂಪನ್ನರು, ಪ್ರತಿಯೊಂದು ವಸ್ತುವಿನಲ್ಲಿಯೂ ಸಂಪನ್ನ, ಪ್ರತೀ ಜನ್ಮದಲ್ಲಿಯೂ ಸದಾ ರಾಜನ ರಾಯಲ್ಟಿಯಲ್ಲಿರುತ್ತಾರೆ. ಪ್ರತಿಯೊಬ್ಬರ ಜೀವನದಲ್ಲಿ ನಾಲ್ಕೂಕಡೆಯಲ್ಲಿಯೂ ಸರ್ವಪ್ರಾಪ್ತಿಗಳು ಸೇವೆ ಮಾಡುವುದಕ್ಕಾಗಿ ಪರಿಕ್ರಮಿಸುತ್ತಿರುತ್ತವೆ. ನಿಮಗೆ ಇಚ್ಛೆಯಿಲ್ಲದಿದ್ದರೂ, ನನ್ನ ಮಾಲೀಕನು ನನ್ನನ್ನು ಕಾರ್ಯದಲ್ಲಿ ತೊಡಗಿಸಲಿ ಎಂದು ಸರ್ವಪ್ರಾಪ್ತಿಗಳ ಇಚ್ಛೆಯಿರುತ್ತದೆ. ನಾಲ್ಕೂ ಕಡೆಯಲ್ಲಿ ವೈಭವಗಳ ಖಜಾನೆಯು ಸಂಪನ್ನವಾಗಿರುತ್ತದೆ. ಪ್ರತಿಯೊಂದು ವೈಭವವೂ ತನ್ನ ತನ್ನ ಸುಖವನ್ನು ಕೊಡುವುದಕ್ಕಾಗಿ ಸದಾ ಎವರೆಡಿಯಾಗಿರುತ್ತದೆ. ಸದಾ ಖುಷಿಯ ವಾದ್ಯಗಳು ತಾನಾಗಿಯೇ ಮೊಳಗುತ್ತಿರುತ್ತವೆ. ವಾದ್ಯಗಳನ್ನು ಮೊಳಗಿಸುವ ಅವಶ್ಯಕತೆಯೂ ಇರುವುದಿಲ್ಲ. ತಮ್ಮ ರಚನೆಯಾದ ವನಸ್ಪತಿಯು ತಾವು ವಿಶ್ವಪತಿಯರ ಮುಂದೆ ಎಲೆಗಳನ್ನು ಅಲುಗಾಡಿಸುವುದರಿಂದ, ಅನೇಕ ಪ್ರಕಾರದ ವಾದ್ಯಗಳ ನಾದವಾಗುತ್ತದೆ. ವೃಕ್ಷಗಳ ಎಲೆಗಳು ಅಲುಗಾಡುವುದು, ತೇಲಾಡುವುದು, ಭಿನ್ನ-ಭಿನ್ನ ಪ್ರಕಾರದಲ್ಲಿ ಪ್ರಾಕೃತಿಕವಾಗಿಯೇ ನಾದವಿರುತ್ತದೆ. ಹೇಗೆ ಇಲ್ಲಿಅನೇಕ ಪ್ರಕಾರದ ವಾದ್ಯಗಳನ್ನು ತಯಾರು ಮಾಡುತ್ತಾರೆಯೋ, ಹಾಗೆಯೇ ಪಕ್ಷಿಗಳ ಮಾತುಗಳು ವಿಭಿನ್ನವಾದ ನಾದವಾಗಿರುತ್ತದೆ. ಚೈತನ್ಯ ಆಟಿಕೆಯಂತೆ ಅನೇಕ ಪ್ರಕಾರದ ಆಟವನ್ನು ತಮಗೆ ತೋರಿಸುತ್ತದೆ. ಹೇಗೆ ಇತ್ತೀಚಿಗೆ ಇಲ್ಲಿನ ಮನುಷ್ಯರು ಮನೋರಂಜನೆಗಾಗಿ ಭಿನ್ನ-ಭಿನ್ನ ಪ್ರಕಾರದಿಂದ ಮಾತನಾಡುವುದನ್ನು(ಮಿಮಿಕ್ರಿ) ಕಲಿಯುತ್ತಾರೆಯೋ ಹಾಗೆಯೇ ಅಲ್ಲಿಯೂ ಪಕ್ಷಿಗಳು ಭಿನ್ನ-ಭಿನ್ನ ರೀತಿಯಿಂದ ಸುಂದರವಾದ ಶಬ್ದಗಳಿಂದ ತಮ್ಮ ಸನ್ನೆಯಿಂದ ಮನೋರಂಜನೆ ಮಾಡುತ್ತವೆ. ಇದೇ ರೀತಿ ಈ ಫಲ ಮತ್ತು ಹೂಗಳು ಮತ್ತು ಫಲಗಳಲ್ಲಿಯೂ ವೆರೈಟಿಯಾಗಿರುವ ರಸವಿರುತ್ತದೆ. ಹೇಗೆ ಇಲ್ಲಿ ಭಿನ್ನ ಭಿನ್ನವಾಗಿ ಉಪ್ಪು, ಸಿಹಿ ಅಥವಾ ಮಸಾಲಾ ಮುಂತಾದವನ್ನು ಹಾಕಿ ರಸ್ನಾ ತಯಾರು ಮಾಡುತ್ತೀರಿ, ಹಾಗೆಯೇ ಅಲ್ಲಿ ಪ್ರಕೃತಿಯ ಫಲವು ಭಿನ್ನ ಭಿನ್ನವಾದ ರಸ್ನಾ ಆಗುವಂತದ್ದಿರುತ್ತದೆ. ಈ ಸಕ್ಕರೆ ಫ್ಯಾಕ್ಟರಿ ಮುಂತಾದವುಗಳು ಅಲ್ಲಿರುವುದಿಲ್ಲ. ಆದರೆ ಶುಗರ್‌ಫಲವಿರುತ್ತದೆ. ಎಂತಹ ಸ್ವಾಧವು ಬೇಕೋ, ಅಂತಹ ಸ್ವಾದದ ಅನುಭವ ಪ್ರಕೃತಿಯ ಫಲದಿಂದ ಮಾಡಿಕೊಳ್ಳಬಹುದು. ಈ ಎಲೆಗಳ ಪಲ್ಯವಿರುವುದಿಲ್ಲ ಆದರೆ ಫಲ ಮತ್ತು ಹೂವಿನ ಪಲ್ಯವಿರುತ್ತದೆ. ಹೂಗಳ ಮತ್ತು ಫಲದ ಪಲ್ಯವನ್ನು ಮಾಡುತ್ತಾರೆ. ಹಾಲಿನದಂತು ನದಿಗಳಿರುತ್ತವೆ. ಒಳ್ಳೆಯದು- ಈಗ ಕುಡಿಯುತ್ತೀರಾ? ನ್ಯಾಚುರಲ್ ರಸದ ಫಲವೇ ಬೇರೆಯಿರುತ್ತದೆ, ತಿನ್ನುವ ಫಲವೇ ಬೇರೆ ಇರುತ್ತದೆ. ಪರಿಶ್ರಮ ಪಟ್ಟು ರಸವನ್ನು ತೆಗೆಯಬೇಕಾಗಿರುವುದಿಲ್ಲ. ಪ್ರತಿಯೊಂದು ಫಲವೂ ಇಷ್ಟು ಸಂಪನ್ನವಾಗಿರುತ್ತದೆ. ಹೇಗೆಂದರೆ ಈಗ ತೆಂಗಿನ ನೀರನ್ನು

ಕುಡಿಯುತ್ತೀರಲ್ಲವೆ. ಹೀಗೆ ಫಲವನ್ನು ತೆಗೆದುಕೊಂಡಿರಿ, ಅದನ್ನು ಬೆರಳಲ್ಲಿ ಒತ್ತಿದಿರಿ ಮತ್ತು ರಸವನ್ನು ಕುಡಿದಿರಿ- ಇಷ್ಟು ಸಹಜವಾಗಿರುತ್ತದೆ. ಸ್ನಾನಕ್ಕಾಗಿ ನೀರಿರುತ್ತದೆ, ಅದೂ ಸಹ ಹೇಗೆಂದರೆ ವರ್ತಮಾನದ ಗಂಗಾಜಲವು ಬೆಟ್ಟಗಳ ಗಿಡಮೂಲಿಕೆಗಳ ಮೇಲಿನಿಂದ ಹರಿದು ಬರುವ ಕಾರಣದಿಂದ ವಿಶೇಷ ಮಹತ್ವಿಕೆಯಿದೆ, ಅದರಲ್ಲಿ ಹುಳಹಿಡಿಯುವುದಿಲ್ಲ ಆದ್ದರಿಂದ ಪಾವನ ಎಂದು ಗಾಯನವೂನವಿದೆ. ಹಾಗೆಯೇ ಅಲ್ಲಿ ಬೆಟ್ಟಗಳಲ್ಲಿ ಸುಗಂಧವಿರುವ ಗಿಡಮೂಲಿಕೆಗಳಿರುತ್ತದೆ, ಅಲ್ಲಿಂದ ನೀರು ಬರುವಕಾರಣದಿಂದ ಪ್ರಕೃತಿದತ್ತವಾಗಿ ಸುಗಂಧಭರಿತವಾಗಿರುತ್ತದೆ. ಸುಗಂಧವನ್ನು ಹಾಕುವುದಿಲ್ಲ ಆದರೆ ಸ್ವಾಭಾವಿಕವಾಗಿ ಬೆಟ್ಟಗಳಿಂದ ಹರಿದುಬರುತ್ತದೆ. ಅಲ್ಲಿ ಸುಗಂಧವಿರುವ ಮೂಲಿಕೆಗಳಿರುತ್ತದೆ, ಅದರಿಂದ ಹರಿದುಬರುತ್ತಾ ನೀರು ಸಹ ಸುಂದರ ಸುಗಂಧದಿಂದ ಕೂಡಿರುತ್ತದೆ.

ಅಲ್ಲಿ ಅಮೃತವೇಳೆಯಲ್ಲಿ ಹಾಡನ್ನು ಹಾಕುವುದಿಲ್ಲ, ಸ್ವಾಭಾವಿಕವಾಗಿ ಪಕ್ಷಿಗಳ ಶಬ್ದವೇ ನಾದವಾಗಿರುತ್ತದೆ, ಅದರಿಂದ ತಾವುಗಳು ಏಳುತ್ತೀರಿ. ಏಳುವ ಸಮಯವು ಮುಂಜಾನೆಯೇ ಆಗಿರುತ್ತದೆ ಆದರೆ ಅಲ್ಲಿ ಸುಸ್ತಾಗುವುದಿಲ್ಲ ಏಕೆಂದರೆ ಅಲ್ಲಿ ಚೈತನ್ಯ ದೇವತೆಗಳು ಏಳುತ್ತೀರಿ. ಆದ್ದರಿಂದ ಭಕ್ತಿಯಲ್ಲಿಯೂ ಭಕ್ತರು ಬೆಳಗ್ಗೆ ಎದ್ದು ಏಳಿಸುತ್ತಾರೆ. ಭಕ್ತಿಯ ಮಹತ್ವಿಕೆಯೂ ಅಮೃತವೇಳೆಯದಾಗಿದೆ. ಏಳುವುದೂ ಮುಂಜಾನೆಯೇ ಆಗಿರುತ್ತದೆ ಆದರೆ ಸದಾಕಾಲ ಜಾಗೃತಜ್ಯೋತಿಯಾಗಿರುತ್ತೀರಿ. ಯಾವುದೇ ಪರಿಶ್ರಮದ ಕೆಲಸವೇ ಇರುವುದಿಲ್ಲ, ಪರಿಶ್ರಮವೂ ಇರುವುದಿಲ್ಲ, ಬುದ್ಧಿಯ ಕೆಲಸವೂ ಇಲ್ಲ, ಯಾವುದೇ ಹೊರೆಯೂ ಇರುವುದಿಲ್ಲ. ಆದ್ದರಿಂದ ಏಳುವುದು ಮತ್ತು ಬೆಳಗ್ಗೆ ಏಳಬೇಕಾಗುತ್ತದೆ. ಚಿನ್ನದ ಸಮಾನ, ಎಂದು ಯಾವರೀತಿ ಈಗ ಯೋಚಿಸುತ್ತೀರಿ, ಅಲ್ಲಿ ಈ ಸಂಕಲ್ಪವೇ ಇರುವುದಿಲ್ಲ. ಒಳ್ಳೆಯದು- ಅಲ್ಲಿ ಓದುತ್ತೀರಾ? ಅಥವಾ ಓದುವುದನ್ನು ಬಿಡಲು ಬಯಸುತ್ತೀರಾ? ಅಲ್ಲಿ ಓದುವುದೂ ಸಹ ಒಂದು ಆಟವಾಗಿದೆ. ಆಟ-ಆಟದಲ್ಲಿಯೇ ಓದುತ್ತೀರಿ. ತಮ್ಮ ರಾಜಧಾನಿಯ ಜ್ಞಾನವಂತು ಇಟ್ಟುಕೊಂಡಿರುತ್ತೀರಲ್ಲವೆ. ಅಂದಮೇಲೆ ರಾಜಧಾನಿಯ ಜ್ಞಾನದ ವಿದ್ಯೆಯಿರುತ್ತದೆ. ಆದರೆ ಅಲ್ಲಿನ ಮುಖ್ಯವಾದ ವಿಷಯವೇ ಚಿತ್ರಕಲೆ (ಡ್ರಾಯಿಂಗ್) ಆಗಿದೆ. ಚಿಕ್ಕ ದೊಡ್ಡವರೆಲ್ಲರೂ ಚಿತ್ರಕಾರರಾಗಿರುತ್ತಾರೆ. ವಾದ್ಯ, ಚಿತ್ರಕಲೆ ಮತ್ತು ಆಟ ವಾದ್ಯ ಅರ್ಥಾತ್ ಸಂಗೀತವಿದ್ಯೆಯ ಹಾಡನ್ನು ಹಾಡುತ್ತಾರೆ ಮತ್ತು ಆಡುತ್ತಾರೆ ಇದರಲ್ಲಿಯೇ ವಿದ್ಯೆಯನ್ನು ಓದುತ್ತಾರೆ. ಅಲ್ಲಿನ ಚರಿತ್ರೆಯೂ ಸಂಗೀತ ಮತ್ತು ಕವಿತೆಯ ರೂಪದಲ್ಲಿ ಇರುತ್ತದೆ ಇಲ್ಲಿಯ ಹಾಗೆ ಸೀದಾ ಇರುವ, ಬೋರ್ ಆಗುವಂತಹ ಮಾತಿರುವುದಿಲ್ಲ. ರಾಸ್ ಸಹ ಒಂದು ಆಟವೇ ತಾನೆ. ನಾಟಕವನ್ನೂ ಮಾಡುತ್ತಾರೆ, ಬಾಕಿ ಸಿನಿಮಾ ಇರುವುದಿಲ್ಲ, ನಾಟಕವಿರುತ್ತದೆ. ನಾಟಕವೂ ಹಾಸ್ಯದ ಮನೋರಂಜನೆಗಾಗಿ ಇರುತ್ತದೆ. ನಾಟಕ ಶಾಲೆಗಳೂ ಬಹಳಷ್ಟಿರುತ್ತವೆ. ಅಲ್ಲಿನ ಮಹಲುಗಳೊಳಗೆ ವಿಮಾನದ ಸಾಲು ಮತ್ತು ವಿಮಾನವನ್ನೂ ನಡೆಸುವುದು ಬಹಳ ಸಹಜವಾಗಿರುತ್ತದೆ. ಅಟೋಮೆಟಿಕ್ ಎನರ್ಜಿಯ ಆಧಾರದಿಂದ ಎಲ್ಲಾ ಕಾರ್ಯಗಳೂ ನಡೆಯುತ್ತವೆ. ತಮ್ಮ ಕಾರಣದಿಂದಲೇ ಕೊನೆಯ ಅನ್ವೇಷಣೆಯೂ ಮಾಡಲಾಗುತ್ತದೆ.

ನಾಣ್ಯಗಳಲ್ಲಿಯೂ ಚಿನ್ನದ ನಾಣ್ಯಗಳಿರುತ್ತವೆ ಆದರೆ ಇತ್ತೀಚೆಗೆ ಇರುವಂತಿರುವುದಿಲ್ಲ. ರೂಪರೇಖೆಗಳು ಪರಿವರ್ತನೆಯಾಗುತ್ತದೆ. ಇನ್ನೂ ಒಳ್ಳೊಳ್ಳೆಯ ಡಿಜೈನ್‌ನಿಂದ ಮಾಡಿರುವುದಾಗಿರುತ್ತದೆ. ನಿಮಿತ್ತ ಮಾತ್ರದಲ್ಲಿ ಲೇವಾದೇವಿಯಿರುತ್ತದೆ. ಹೇಗೆ ಇಲ್ಲಿ ಮಧುಬನದಲ್ಲಿ ಪರಿವಾರವಿದ್ದರೂ ನಿಮಿತ್ತರನ್ನಂತು ವಿಭಿನ್ನವರ್ಗಕ್ಕಾಗಿ ನೇಮಿಸಲಾಗಿದೆಯಲ್ಲವೆ. ಪರಿವಾರವಾಗಿದ್ದರೂ ನಿಮಿತ್ತರಿಂದ ತೆಗೆದುಕೊಳ್ಳುತ್ತೀರಲ್ಲವೆ. ಒಬ್ಬರು ಕೊಡುತ್ತಾರೆ ಮತ್ತೊಬ್ಬರು ತೆಗೆದುಕೊಳ್ಳುತ್ತಾರೆ. ಹಾಗೆಯೇ ಅಲ್ಲಿಯೂ ಪರಿವಾರದ ಸಿಸ್ಟಮ್ ಇರುತ್ತದೆ. ಅಂಗಡಿಯ ಮಾಲೀಕ ಮತ್ತು ಗ್ರಾಹಕನೆಂಬ ಭಾವವಿರುವುದಿಲ್ಲ. ಮಾಲೀಕತ್ವದ ಭಾವವಿರುತ್ತದೆ. ಪರಸ್ಪರದಲ್ಲಿ ಕೇವಲ ಕೊಟ್ಟುತೆಗೆದುಕೊಳ್ಳುವುದನ್ನು ಮಾಡುತ್ತಾರೆ. ಸ್ವಲ್ಪ ಕೊಡುತ್ತಾರೆ, ಸ್ವಲ್ಪ ತೆಗೆದುಕೊಳ್ಳುತ್ತಾರೆ, ಯಾರಲ್ಲಿಯೂ ಕೊರತೆಯಿರುವುದಿಲ್ಲ. ಪ್ರಜೆಗಳಿಗೂ ಕೊರತೆಯಿರುವುದಿಲ್ಲ, ಪ್ರಜೆಗಳೂ ಸಹ ತಮ್ಮ ಶರೀರ ನಿರ್ವಹಣೆಯ ಲೆಕ್ಕದಿಂದ ಪದಮಪಟ್ಟು ಸಂಪನ್ನವಾಗಿರುತ್ತಾರೆ. ಆದ್ದರಿಂದ ನಾನು ಗ್ರಾಹಕನಾಗಿದ್ದೇನೆ, ಇವರು ಮಾಲೀಕನಾಗಿದ್ದಾರೆ ಎಂಬ ಭಾವವಿರುವುದಿಲ್ಲ. ಸ್ನೇಹದ ಲೇವಾದೇವಿಯಿರುತ್ತದೆ. ಲೆಕ್ಕಾಚಾರಗಳ ಸೆಳೆತಗಳಿರುವುದಿಲ್ಲ. ರಿಜಿಸ್ಟರ್ ಇರುವುದಿಲ್ಲ.

ರತ್ನಜಡಿತ ವಾದ್ಯಗಳಿರುತ್ತವೆ, ಸ್ವಾಭಾವಿಕವಾದ ವಾದ್ಯಗಳಿರುತ್ತವೆ. ಪರಿಶ್ರಮ ಪಡುವಂತದ್ದಿರುವುದಿಲ್ಲ. ಬೆರಳನ್ನಿಡುತ್ತೀರಿ ಮತ್ತು ಮೊಳಗಿತು ಎನ್ನುವಂತಿರುತ್ತದೆ. ವಸ್ತ್ರಗಳಂತು ಬಹಳ ಒಳ್ಳೆಯದನ್ನು ತೊಡುತ್ತೀರಿ. ಎಂತಹ ಕಾರ್ಯವೋ ಅಂತಹ ಉಡುಪುಗಳಿರುತ್ತವೆ. ಎಂತಹ ಸ್ಥಾನವೋ ಅಂತಹ ಉಡುಪು. ಭಿನ್ನ ಭಿನ್ನ ಉಡುಪನ್ನು ಧರಿಸಲಾಗುತ್ತದೆ ಆದರೆ ಹೊರೆಯಿರುವುದಿಲ್ಲ. ಹತ್ತಿಗಿಂತಲೂ ಹಗುರವಾಗಿರುತ್ತದೆ. ಅಪ್ಪಟ ಚಿನ್ನವಿರುತ್ತದೆ ಮತ್ತು ಅದರಲ್ಲಿ ಈ ರೀತಿ ವಜ್ರಗಳಿರುತ್ತದೆ, ಪ್ರತಿಯೊಂದು ವಜ್ರದಿಂದ ಭಿನ್ನ-ಭಿನ್ನವಾದ ರಂಗಿನ ಲೈಟುಗಳು ಕಂಡು ಬರುತ್ತದೆ. ಒಂದು ವಜ್ರದಿಂದ 8 ರಂಗು ಕಾಣಿಸುತ್ತದೆ. ಇಲ್ಲಿ ಭಿನ್ನ ಭಿನ್ನ ರಂಗಿನ ಟ್ಯೂಬ್‌ಲೈಟ್‌ಗಳನ್ನು ಹಾಕುತ್ತಾರಲ್ಲವೆ. ಅಲ್ಲಿ ವಜ್ರವೇ ಭಿನ್ನ-ಭಿನ್ನ ರಂಗಿನ ಟ್ಯೂಬ್‌ನಂತೆ ಹೊಳೆಯುತ್ತದೆ. ಪ್ರತಿಯೊಂದು ಮಹಲುಗಳು ರಂಗು- ರಂಗಿನ ಲೈಟುಗಳಿಂದ ಶೃಂಗಾರಿತವಾಗಿರುತ್ತದೆ. ಹೇಗೆ ಇಲ್ಲಿ ಒಂದು ವಸ್ತುವನ್ನು ಅನೇಕ ಕನ್ನಡಿಯನ್ನಿಟ್ಟು, ಅನೇಕ ರೂಪದಿಂದ ತೋರಿಸುತ್ತೀರೋ ಹಾಗೆಯೇ ಅಲ್ಲಿನ ವೈಡೂರ್ಯಗಳೂ ಈ ರೀತಿಯಿರುತ್ತದೆ. ಮೇಲಿನ ದೃಶ್ಯವು ಅನೇಕ ರೂಪದಲ್ಲಿ ಕಾಣಿಸುತ್ತದೆ. ಮಹಲುಗಳಲ್ಲಿ ಚಿನ್ನದ ಲೈಟ್ ಮತ್ತು ವಜ್ರಗಳ ಲೈಟ್ ಅರ್ಥಾತ್ ಎರಡೂ ಹೊಳಪುಗಳು ಕೂಡಿ ಹೊಳೆಯುತ್ತಿರುವಂತೆ ಕಾಣಿಸುತ್ತದೆ. ಸೂರ್ಯನ ಕಿರಣಗಳಿಂದ ವಜ್ರ ಮತ್ತು ಚಿನ್ನವು ಹೇಗೆಂದರೆ- ಸಾವಿರಾರು ಲೈಟುಗಳು ಉರಿಯುತ್ತಿದೆ ಎನ್ನುವಂತೆ ಹೊಳೆಯುತ್ತದೆ. ಇಷ್ಟೊಂದು ವೈರುಗಳು ಮುಂತಾದವುಗಳ ಅವಶ್ಯಕತೆಯೇ ಇರುವುದಿಲ್ಲ. ಇತ್ತೀಚಿನ ರಾಜರ ಫ್ಯಾಮಿಲಿಯಲ್ಲಿ ವಿದ್ಯುದ್ದೀಪಗಳು ಉರಿಯುತ್ತಿರುವುದು ಬಹಳ ಸುಂದರವಾದ ರೀತಿಯಲ್ಲಿರುವುದನ್ನು ನೋಡುತ್ತೀರಿ. ಭಿನ್ನ-ಭಿನ್ನ ಪ್ರಕಾರದ ಲ್ಯಾಂಪುಗಳ ಡಿಜೈನ್‌ನು ನೋಡುತ್ತೀರಿ. ಅಲ್ಲಿ ಸತ್ಯವಜ್ರಗಳಿರುವ ಕಾರಣದಿಂದ ಒಂದು ದೀಪವು ಅನೇಕ ದೀಪಗಳ ಕಾರ್ಯವನ್ನು ಮಾಡುತ್ತದೆ. ಹೆಚ್ಚಿನ ಪರಿಶ್ರಮಪಡಬೇಕಾಗುವುದಿಲ್ಲ. ಎಲ್ಲವೂ ಸ್ವಾಭಾವಿಕವಾಗಿಯೇ ಇರುತ್ತದೆ.

ಭಾಷೆಯಂತು ಬಹಳ ಶುದ್ಧವಾದ ಹಿಂದಿಯೇ ಇರುತ್ತದೆ. ಪ್ರತಿಯೊಂದು ಶಬ್ದವು ವಸ್ತುವನ್ನು ಸಿದ್ಧ ಮಾಡುತ್ತದೆ. ಇಂತಹ ಭಾಷೆಯಿರುತ್ತದೆ. (ವಿದೇಶದವರಿಗೆ) ತಮ್ಮ ಇಂಗ್ಲೆಂಡ್ ಮತ್ತು ಅಮೇರಿಕಾ ಎಲ್ಲಿ ಹೋಗುತ್ತದೆ? ಅಲ್ಲಿ ಮಹಲುಗಳನ್ನು ಮಾಡಬೇಡಿ ಮಹಲುಗಳನ್ನಂತು ಭಾರತದಲ್ಲಿಯೇ ನಿರ್ಮಿಸಬೇಕಾಗಿದೆ. ಅಲ್ಲಿ ಕೇವಲ ಸುತ್ತಾಡುವುದಕ್ಕಾಗಿ ಹೋಗಿರಿ, ಅದು ಹೊರ ಸಂಚಾರದ ಸ್ಥಾನ, ಸುತ್ತಾಡುವ ಸ್ಥಾನವಾಗಿರುತ್ತದೆ. ಅದೂ ಸಹ ಅಲ್ಪಸ್ವಲ್ಪ ಇರುತ್ತದೆ, ಎಲ್ಲವೂ ಇರುವುದಿಲ್ಲ ವಿಮಾನವನ್ನು ಚಾಲನೆ ಮಾಡಿದಿರಿ ಮತ್ತು ಶಬ್ಧಕ್ಕಿಂತಲೂ ಮುಂಚೆಯೇ ತಲುಪಿಬಿಡುತ್ತೀರಿ. ವಿಮಾನವು ಇನ್ನೂ ತೀವ್ರವೇಗದ್ದಾಗಿರುತ್ತದೆ. ಹೇಗೆ ಫೋನಿನಲ್ಲಿ ಮಾತನಾಡುತ್ತೀರಲ್ಲವೆ, ಅಷ್ಟು ಬೇಗನೆ ತಲುಪಿಬಿಡುತ್ತೀರಿ. ಆದ್ದರಿಂದ ಫೋನ್ ಮಾಡುವ ಅವಶ್ಯಕತೆಯೇ ಇರುವುದಿಲ್ಲ. ಫ್ಯಾಮಿಲಿಯವರು ಹೋಗುವಂತಹ ವಿಮಾನವೂ ಇರುತ್ತದೆ ಮತ್ತು ಒಬ್ಬೊಬ್ಬರು ಹೋಗುವುದಕ್ಕಾಗಿಯೂ ವೈಯಕ್ತಿಕ ವಿಮಾನ ಇರುತ್ತದೆ. ಯಾವ ಸಮಯದಲ್ಲಿ ಯಾವ ವಿಮಾನವು ಬೇಕು, ಅದನ್ನು ಉಪಯೋಗ ಮಾಡುತ್ತೀರಿ. ಈಗ ವಿಮಾನದಲ್ಲಿ ಕುಳಿತುಬಿಟ್ಟಿರಿ! ಈಗ ಸತ್ಯಯುಗೀ ವಿಮಾನವನ್ನು ಬಿಟ್ಟು ಬುದ್ಧಿಯ ವಿಮಾನದಲ್ಲಿ ಬಂದುಬಿಡಿ, ಬುದ್ಧಿಯ ವಿಮಾನವೂ ಇಷ್ಟು ವೇಗವಿರುವುಳ್ಳದ್ದಾಗಿದೆಯೇ? ಸಂಕಲ್ಪವು (ಸ್ಪೀಡ್)ವೇಗವಾಗಿದೆಯೇ? ಸಂಕಲ್ಪ ಮಾಡಿದಿರಿ ಮತ್ತು ನಕ್ಷತ್ರ ಹಾಗೂ ನಕ್ಷತ್ರಗಳಿಗಿಂತಲೂ ದೂರದಲ್ಲಿರುವ ತಮ್ಮ ಮನೆಗೆ ತಲುಪಿಬಿಟ್ಟೆವು. ಬುದ್ಧಿಯ ವಿಮಾನವು ಈ ರೀತಿ ಸದಾ ಎವರೆಡಿಯಾಗಿದೆಯೇ? ಯಾವುದೇ ಪ್ರಕಾರದ ದುರ್ಘಟನೆಯಾಗಬಾರದು, ಈ ರೀತಿ ಸದಾ ವಿಘ್ನಗಳಿಂದ ದೂರವಿದ್ದೀರಾ? ಪರಮಧಾಮದಲ್ಲಿ ಹೋಗಬೇಕೆಂದು ಬಯಸುತ್ತೀರಿ ಮತ್ತು ಧರಣಿಯನ್ನೇ ಬಿಡಲು ಸಾಧ್ಯವಿಲ್ಲವೇ ಅಥವಾ ಯಾವುದಾದರೂ ಬೆಟ್ಟಕ್ಕೆ ಘರ್ಷಣೆಯಾಗಿ ಬಿದ್ದುಹೋದೆವು ಎನ್ನುವಂತಾಗಬಾರದು. ವ್ಯರ್ಥಸಂಕಲ್ಪಗಳೂ ಸಹ ಒಂದು ರೀತಿ ಬೆಟ್ಟದೊಂದಿಗೆ ಘರ್ಷಣೆಯಾಗುವುದಾಗಿದೆ. ಅಂದಮೇಲೆ ದುರ್ಘಟನೆಯಿಂದ ದೂರವಿರುವ ಎವರೆಡಿ ಬುದ್ಧಿಯ ವಿಮಾನವಿದೆಯೇ? ಮೊದಲು ಈ ಬುದ್ಧಿಯ ವಿಮಾನದಲ್ಲಿ ಏರಿದಾಗ ಆ ಸತ್ಯಯುಗದ ವಿಮಾನವು ಸಿಗುತ್ತದೆ. ಈ ರೀತಿ ಎವರೆಡಿಯಾಗಿದ್ದೀರಾ? ಹೇಗೆ ಸ್ವರ್ಗದ ಮಾತುಗಳಲ್ಲಿ ಹಾ ಹಾ ಎನ್ನುತ್ತೀರಿ, ಹಾಗೆಯೇ ಈ ಮಾತುಗಳಲ್ಲಿಯೂ ಹಾ ಹಾ ಎನ್ನುತ್ತಿಲ್ಲವಲ್ಲ.

ಇಂದು ವತನದಲ್ಲಿ ಸ್ವರ್ಗದ ನಕ್ಷೆಯನ್ನು ಬಿಡಿಸಲಾಗಿತ್ತು ಆದ್ದರಿಂದ ತಮಗೆ ತಿಳಿಸಲಾಯಿತು. ಬ್ರಹ್ಮಾ ತಂದೆಯು ಸ್ವರ್ಗಕ್ಕೆ ಹೋಗುವುದಕ್ಕಾಗಿ ತಯಾರು ಮಾಡುತ್ತಿದ್ದಾರಲ್ಲವೆ, ಅಂದಮೇಲೆ ಸ್ವರ್ಗದ ನಕ್ಷೆಯು ಬಿಡಿಸುತ್ತಿದ್ದಾರೆ. ತಾವೆಲ್ಲರೂ ತಯಾರಾಗಿದ್ದೀರಲ್ಲವೆ? ಯಾವ ತಯಾರಿಯೆಂದು ಗೊತ್ತಿದೆಯೇ? ತಂದೆಯ ಜೊತೆ ಸ್ವರ್ಗದ ದ್ವಾರದಿಂದ ಯಾರು ಪಾಸಾಗುತ್ತಾರೆ. ಅದರ ಪಾಸನ್ನು ತೆಗೆದುಕೊಂಡಿದ್ದೀರಾ? ಗೇಟ್- ಪಾಸ್‌ಅಂತು ಇರುತ್ತದೆ. ಆದರೆ ತಂದೆಯ ಜೊತೆಗೆ ಗೇಟ್ ಪಾಸ್ ಆಗುವ ಪಾಸನ್ನು ಪಡೆದಿದ್ದೀರಾ? ಹೇಗೆ ಇಲ್ಲಿ ಒಂದು ವಿಐಪಿ ಪಾಸ್ ಇರುತ್ತದೆ, ಮತ್ತೆ ರಾಷ್ಟ್ರಪತಿಗೂ ಪಾಸ್ ಇರುತ್ತದೆ. ಇದು ವಿಶ್ವಪತಿಯ ಗೇಟ್-ಪಾಸ್ ಆಗಿದೆ. ಯಾವ ಗೇಟ್-ಪಾಸ್ ತೆಗೆದುಕೊಂಡಿದ್ದೀರಿ? ತಮ್ಮ ಪಾಸ್‌ನ್ನು ಪರಿಶೀಲನೆ ಮಾಡಿರಿ.

**ಇಂತಹ ವರ್ತಮಾನದ ಸಾಹೇಬನ ಮಕ್ಕಳಿಂದ ರಾಜಕುಮಾರ, ಪ್ರಕೃತಿಯ ಮಾಲೀಕರಿಂದ ವಿಶ್ವದ ಮಾಲೀಕರು, ಮಾಯಾಜೀತರಿಂದ ಜಗತ್ ಜೀತರು, ಒಂದು ಸಂಕಲ್ಪದ ವಿಧಿಯ ಮೂಲಕ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವವರು. ಇಂತಹ ಸರ್ವಸಿದ್ಧಿ ಸ್ವರೂಪ, ಸದಾ ಪಾಸ್ (ಸಮೀಪ) ಇರುವಂತಹ ಮತ್ತು ಪಾಸ್ ಆಗಿ ಜೊತೆಯಲ್ಲಿ ಪಾಸ್ ಮಾಡುವಂತಹ, ಶ್ರೇಷ್ಠಾತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದೆಹಲಿ ಪಾರ್ಟಿಯೊಂದಿಗೆ ವಾರ್ತಾಲಾಪ :-**

1. ತಮ್ಮ ರಾಜಧಾನಿಯನ್ನು ಶೃಂಗಾರ ಮಾಡುವುದಕ್ಕಾಗಿ ನೆನಪು ಮತ್ತು ಸೇವೆಯ ಸಮತೋಲನವನ್ನಿಡಿ.

ಎಲ್ಲರೂ ತಮ್ಮ ರಾಜಧಾನಿಯ ಸಮಾಚಾರವನ್ನಂತು ಕೇಳಿದಿರಿ. ದೆಹಲಿ ನಿವಾಸಿಗಳಿಗೆ ಈಗ ರಾಜಧಾನಿಯನ್ನು ತಯಾರು ಮಾಡುವ ಜವಾಬ್ದಾರಿಯ ವಿಶೇಷ ಜವಾಬ್ದಾರಿಯಿದೆ. ಇಂತಹ ಜವಾಬ್ದಾರರೆಂದು ತಿಳಿದು ನಡೆಯುತ್ತೀರಾ? ಅನ್ಯರು ಸೇವೆ ಮಾಡಬೇಕು ಮತ್ತು ಅದರ ಫಲವನ್ನು ತಾವು ತಿನ್ನಬೇಕು ಈ ರೀತಿಯಂತು ಇಲ್ಲ ತಾನೆ . ಸೇವೆಯನ್ನು ಮಾಡಿ ಫಲವನ್ನು ಸೇವಿಸಬೇಕಾಗಿದೆ. ಅದೇ ರೀತಿಯಲ್ಲಿ ನೋಡಿ- ಯಾರಾದರೆ ಕೆಲಸ ಮಾಡಿ, ತಮ್ಮ ಪರಿಶ್ರಮದಿಂದ, ಪ್ರೀತಿಯಿಂದ ವಸ್ತುವನ್ನು ತಯಾರು ಮಾಡುತ್ತಾರೆಂದರೆ ವಿಶೇಷ ಖುಷಿಯಾಗುತ್ತದೆ. ಅಂದ ಮೇಲೆ ತಾವೆಲ್ಲರೂ ವಿಶೇಷವಾಗಿ ಯಾವ ಜವಾಬ್ದಾರಿಯನ್ನು ತೆಗೆದುಕೊಂಡು ರಾಜಧಾನಿಯನ್ನು ಮಾಡುತ್ತಿದ್ದೀರಿ? ರಾಜಧಾನಿಯನ್ನು ಶೃಂಗಾರ ಮಾಡುವವರು ಸೇವೆ ಮತ್ತು ನೆನಪಿನ ಸಮತೋಲದಲ್ಲಿರಿ. ಪ್ರತಿಯೊಂದು ಸಂಕಲ್ಪದಲ್ಲಿಯೂ ಸೇವೆಯಾಗಬೇಕು. ಪ್ರತೀ ಸಂಕಲ್ಪದಲ್ಲಿಯೂ ಸೇವೆಯಾದಾಗ ವ್ಯರ್ಥದಿಂದ ಮುಕ್ತರಾಗಿಬಿಡುತ್ತೀರಿ. ಅಂದ ಮೇಲೆ ಪರಿಶೀಲನೆ ಮಾಡಬೇಕು- ಯಾವ ಸಂಕಲ್ಪವು ಉತ್ಪನ್ನವಾಗಿತ್ತು, ಆ ಸೆಕೆಂಡ್ ಕಳೆದುಹೋಯಿತು, ಅದರಲ್ಲಿ ಸೇವೆ ಮತ್ತು ನೆನಪಿನ ಬ್ಯಾಲೆನ್ಸ್ ಇದ್ದಿತೆ? ಅಂದ ಮೇಲೆ ಫಲಿತಾಂಶವೇನಾಯಿತು? ಪ್ರತೀ ಹೆಜ್ಜೆಯಲ್ಲಿ ಏರುವ ಕಲೆ. ಪ್ರತೀಹೆಜ್ಜೆಯಲ್ಲಿ ಪದಮಗಳಷ್ಟು ಜಮಾ ಆದಾಗಲೇ ರಾಜ್ಯಾಧಿಕಾರಿಯಾಗುತ್ತೀರಿ. ಅಂದ ಮೇಲೆ ಸೇವೆ ಮತ್ತು ನೆನಪಿನ ಚಾರ್ಟನ್ನಿಡಿ, ಸೇವೆಯು ಜೀವನದ ಒಂದು ಅಂಗವಾಗಿ ಬಿಡಲಿ, ಹೇಗೆ ಶರೀರದಲ್ಲಿ ಎಲ್ಲಾ ಅಂಗಗಳು ಅವಶ್ಯಕತೆಯಿದೆಯೋ ಹಾಗೆಯೇ ಬ್ರಾಹ್ಮಣ ಜೀವನದ ವಿಶೇಷ ಅಂಗವು ಸೇವೆಯಾಗಿದೆ. ಬಹಳ ಸೇವೆಯ ಅವಕಾಶಗಳು ಸಿಗುವುದೂ ಭಾಗ್ಯದ ಚಿಹ್ನೆಯಾಗಿದೆ. ಸ್ಥಾನ ಸಿಗುವುದು, ಸಂಗ ಸಿಗುವುದು, ಅವಕಾಶ ಸಿಗುವುದೂ ಸಹ ಭಾಗ್ಯದ ಚಿಹ್ನೆಯಾಗಿದೆ. ತಮ್ಮೆಲ್ಲರಿಗೂ ಸೇವೆಯ ಸುವರ್ಣಾವಕಾಶವಿದೆ. ಜಂಪ್ ಮಾಡುವ ಸಹಯೋಗವು ಸಿಕ್ಕಿದೆ. ಅಂದ ಮೇಲೆ ಸೇವೆಯ ಪ್ರೂಫ್ ಕೊಡಬೇಕಲ್ಲವೆ. ಪ್ರತಿನಿತ್ಯವೂ ಮನಸಾ, ವಾಚಾ, ಕರ್ಮಣಾ, ಸಂಬಂಧ ಮತ್ತು ಸಂಪರ್ಕದಿಂದ ಅವಶ್ಯವಾಗಿ ಅಂಕಗಳು ಜಮಾ ಮಾಡಬೇಕಾಗಿದೆ. ಪ್ರತಿಯೊಂದು ಸೇವಾಕೇಂದ್ರದಲ್ಲಿ ಪ್ರತಿಯೊಂದು ವಿಧದ ನೆನಪಾರ್ಥ ಹೂಗುಚ್ಛವಿರಬೇಕಾಗಿದೆ. ಎಲ್ಲಾ ಪ್ರಕಾರದ ವಿ.ಐ.ಪಿಯ ಸ್ಯಾಂಪಲ್ ಇರಬೇಕು. ವಿ.ಐ.ಪಿಯ ಸೇವೆಯ ವಿಶೇಷ ಸ್ಥಾನವನ್ನು ಮಾಡಬೇಕಾಗಿದೆ.

2. ಏಕರಸ ಸ್ಥಿತಿಯನ್ನು ಮಾಡಿಕೊಳ್ಳುವಂತಹ ಸಹಜ ಸಾಧನ- ಒಬ್ಬ ತಂದೆಯೊಂದಿಗೆ ಸರ್ವ ಸಂಬಂಧಗಳ ಅನುಭವ ಮಾಡಿರಿ:-

ಸದಾ ಒಬ್ಬರ ತಂದೆಯ ನೆನಪಿನಲ್ಲಿರುವ, ಒಬ್ಬ ತಂದೆಯ ಜೊತೆ ಸರ್ವ ಸಂಬಂಧವನ್ನು ನಿಭಾಯಿಸುವ, ಏಕರಸ ಸ್ಥಿತಿಯಲ್ಲಿರುತ್ತೀರಾ? ಒಬ್ಬ ತಂದೆಯ ಮೂಲಕ ಸರ್ವ ಪ್ರಾಪ್ತಿ ಅರ್ಥಾತ್ ಸರ್ವ ಪ್ರಾಪ್ತಿಯ ಅನುಭವ ಮಾಡುವವರಿಗೆ ಏಕರಸ ಸ್ಥಿತಿಯಲ್ಲಿರುವವರು ಎಂದು ಹೇಳಲಾಗುತ್ತದೆ, ಈ ರೀತಿ ಇರುತ್ತೀರಾ? ಅನ್ಯಯಾರೂ ಕಾಣಿಸಬಾರದು. ಸ್ವಲ್ಪ ಕಾಣಿಸುವುದಕ್ಕೆ ಅಲ್ಲಿ ಇರುವುದಾದರೂ ಏನಿದೆ? ನೋಡಲು ಬಾಬಾರವರ ವಿನಃ ಮತ್ತಾವುದೇ ವಸ್ತುವಿದೆಯೇ? ತಂದೆಯಲ್ಲದೆ ಮತ್ತಾರಾದರೂ ತಿಳಿಸುವವರಿದ್ದಾರೆ, ಅವರಿಂದ ಕೇಳಬೇಕು ಎನ್ನುತ್ತೀರಾ? ಅನೇಕರನ್ನು ನೋಡಿದಿರಿ, ಕೇಳಿಬಿಟ್ಟಿರಿ ಮತ್ತು ಅದರ ಪರಿಣಾಮವನ್ನೂ ನೋಡಿದಿರಿ. ಈಗ ಒಬ್ಬರ ನೆನಪಿನಲ್ಲಿ ಏಕರಸ. ಅನೇಕರನ್ನು ಬಿಟ್ಟು ಒಬ್ಬರ ನೆನಪು, ಒಬ್ಬರನ್ನು ನೋಡಿ, ಒಬ್ಬರಿಂದ ಕೇಳಿರಿ, ಒಬ್ಬರೊಂದಿಗೆ ಕುಳಿತುಕೊಳ್ಳಿ..... ಅನೇಕರೊಂದಿಗೆ ನಿಭಾಯಿಸುವುದು ಕಷ್ಟವಾಗುತ್ತದೆ, ಒಬ್ಬರೊಂದಿಗೆ ನಿಭಾಯಿಸುವುದು ಸಹಜವಾಗುತ್ತದೆ. ಅನೇಕ ಜನ್ಮಗಳಲ್ಲಿ ಅನೇಕರೊಂದಿಗೆ ನಿಭಾಯಿಸಿದಿರಿ. ತಂದೆಯೊಂದಿಗೆ ಬೇರೆ, ಟೀಚರ್‌ನೊಂದಿಗೆ ಬೇರೆ, ಗುರುವಿನೊಂದಿಗೆ ಬೇರೆ.... ಈಗ ಬಾಬಾರವರು ಸಹಜ ವಿಧಿಯನ್ನು ತಿಳಿಸಿದರು- ಒಬ್ಬರೊಂದಿಗೆ ನಿಭಾಯಿಸಿರಿ. ಎಲ್ಲಿ ನೋಡಿದರೂ ಅಲ್ಲಿ ಒಬ್ಬರನ್ನೇ ನೋಡಿರಿ, ಇದೇ ಭಾವನೆಯ ಕಾರಣದಿಂದ ಭಕ್ತಿಯಲ್ಲಿ ಸರ್ವವ್ಯಾಪಿ ಎಂದು ಹೇಳಿಬಿಟ್ಟರು. ಅವರು ಹೇಳಿಬಿಡುತ್ತಾರೆ- ಎಲ್ಲಿ ನೋಡಿದರೂ ನೀನೇ ನೀನು..... ತಾವು ಸದಾ ತಂದೆಯ ಜೊತೆಯ ಅನುಭವ ಮಾಡುತ್ತೀರಿ. ಎಲ್ಲಿ ಹೋದರೂ ಅಲ್ಲಿ ತಂದೆಯೇ ತಂದೆಯ ಅನುಭವವಾಗಬೇಕು.

3. ನನ್ನದು ಎನ್ನುವುದು ಸಮಾಪ್ತಿ ಮಾಡುವುದರಿಂದ ಡಬಲ್ ಲೈಟ್ ಸ್ಥಿತಿ:-

ಎಲ್ಲರೂ ತಂದೆಯಿಂದ ಸಂಪೂರ್ಣ ಅಧಿಕಾರವನ್ನು ತೆಗೆದುಕೊಂಡಿದ್ದೀರಾ? ಪೂರ್ಣ ಅಧಿಕಾರವನ್ನು ತೆಗೆದುಕೊಳ್ಳುವುದಕ್ಕಾಗಿ ಹಳೆಯದೆಲ್ಲವನ್ನೂ ಕೊಡಬೇಕಾಗುತ್ತದೆ. ಅಂದಮೇಲೆ ಎರಡೂ ವ್ಯಾಪಾರವನ್ನು ಮಾಡಿದಿರಲ್ಲವೆ? ಅಥವಾ ನಿನ್ನದನ್ನು ನನ್ನದು ಎನ್ನುತ್ತೀರಾ ಆದರೆ ನನ್ನದರಲ್ಲಿ ಕೈ ಹಾಕಬೇಡಿ ಎಂದು ಇಲ್ಲ ಅಲ್ಲವೆ! ಯಾವಾಗ ಒಂದು ಶಬ್ದವು ಬದಲಾಗುತ್ತದೆ ಅರ್ಥಾತ್ ನನ್ನದು-ನಿನ್ನದರಲ್ಲಿ ಬದಲಾಗುತ್ತದೆಯೆಂದರೆ ಡಬಲ್ ಲೈಟ್ ಆಗಿಬಿಡುತ್ತೀರಿ. ಸ್ವಲ್ಪವೇನಾದರೂ ನನ್ನದು ಎನ್ನುವುದು ಬಂದಿತೆಂದರೆ ಮೇಲಿಂದ ಕೆಳಗೆ ಬಂದುಬಿಡುತ್ತೀರಿ. ನಿನ್ನದು ನಿನಗೇ ಅರ್ಪಣೆಯೆಂದರೆ ಸದಾ ಡಬಲ್ ಲೈಟ್ ಮತ್ತು ಸದಾ ಮೇಲೆ ಹಾರುತ್ತೀರುತ್ತೀರಿ ಅರ್ಥಾತ್ ಶ್ರೇಷ್ಠಸ್ಥಿತಿಯಲ್ಲಿ ಇರುತ್ತೀರಿ.

ಅವ್ಯಕ್ತ ಮುರಳಿ/ರಿವೈಜ್ ಕೋರ್ಸ್ 02-01-1980.

***ಬರುವಂತಹ ಪ್ರಪಂಚವು ಹೇಗಿರುತ್ತದೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸತ್ಯವಾದ ಸಾಹೇಬನ ಪುತ್ರನು ಎಂಬ ನಶೆಯಲ್ಲಿ ಸದಾ ಇದ್ದೇನೆ.

2. ನನ್ನ ಜೀವನ ರಾಜಕುಮಾರಿ ರಾಜಕುಮಾರರ ಜೀವನಕ್ಕಿಂತಲೂ ಪದಮಪಟ್ಟು ಶ್ರೇಷ್ಠವಾಗಿದೆ ಎಂದು ತಿಳಿದುಕೊಂಡು ಸಂತೋಷವಾಗಿ ಇದ್ದೇನೆ.

3. ನಾನು ಭವಿಷ್ಯ ಜೀವನದ ಸಂಸ್ಕಾರಗಳನ್ನು ಈಗಲೇ ತುಂಬಿಕೊಳ್ಳುತ್ತಿದ್ದೇನೆ.